158ನಿ೬ = (53)
ನಿ:72
LRR
070226

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ|| ಯತೀಂದ್ರ ಎಸ್. ಇವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:** ರಾಜ್ಯ ಸರ್ಕಾರವು ಇತ್ತೀಚೆಗೆ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ (Unified Land Management System) ನ್ನು ಜಾರಿಗೊಳಿಸಿದ್ದು, ಸದರಿ ವ್ಯವಸ್ಥೆಯಲ್ಲಿ ಸಾಕಷ್ಟು ತಾಂತ್ರಿಕ ನ್ಯೂನ್ಯತೆಗಳಿಂದಾಗಿ ಸಾರ್ವಜನಿಕರಿಗೆ ಸರಿಯಾದ ಸಮಯದಲ್ಲಿ ಸೇವೆಗಳನ್ನು ಒದಗಿಸುವ ಕುರಿತಾಗಿ ಶೀಘ್ರವಾಗಿ ಕ್ರಮ ವಹಿಸುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಗಮನ ಸೆಳೆಯಲಾಗಿದೆ.

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: DPAR 310 EGM 2020, ದಿನಾಂಕ:10-02-2021 ರಲ್ಲಿ Centre for Smart Governance(CSG) ರವರಿಗೆ ಸರಕಾರವು ಭೂಮಿ ಮತ್ತು ಆಸ್ತಿಗಳ ದಾಖಲೆಯ ಸಮಗ್ರ ನಿರ್ವಹಣೆಗಾಗಿ ಇ-ಆಡಳಿತ ವ್ಯವಸ್ಥೆಯ ಮೂಲಕ ಪರಿಹಾರ ಒದಗಿಸಲು ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆಯನ್ನು(ULMS) ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ. ಸದರಿ ಆದೇಶದಂತೆ ರಾಜ್ಯ ಸರ್ಕಾರದ ವಿವಿಧ ನಗರಾಭಿವೃದ್ಧಿ ಮತ್ತು ಭೂ ನಿರ್ವಹಣಾ ಸೇವೆಗಳನ್ನು ಏಕೀಕರಿಸುವ ಉದ್ದೇಶದಿಂದ Unified Land Management System (ULMS) ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ವ್ಯವಸ್ಥೆಯು ತಾಂತ್ರಿಕ ಸ್ಥಿರತೆ, ಭದ್ರತೆ, ಕಾರ್ಯಕ್ಷಮತೆಯನ್ನು ಒಳಗೊಂಡಿರುತ್ತದೆ.

Unified Land Management System (ULMS) ತಂತ್ರಾಂಶವನ್ನು ತಾಂತ್ರಿಕ ಸುಧಾರಣೆ, ಸೇವಾ ಸರಳೀಕರಣ ಮತ್ತು ಸಾರ್ವಜನಿಕರಿಗೆ ಸುಗಮ ಸೇವೆ ಒದಗಿಸುವ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ.

ULMS ತಂತ್ರಾಂಶದಡಿಯಲ್ಲಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಭೂ ಮತ್ತು ಯೋಜನಾ ಸಂಬಂಧಿತ ಸೇವೆಗಳನ್ನು ಒಟ್ಟುಗೂಡಿಸುವ ಉದ್ದೇಶದಿಂದ ಈ ಕೆಳಕಂಡ ಪ್ರಮುಖ ಸೇವಾ ಘಟಕಗಳನ್ನು ಒಳಗೊಂಡಿರುತ್ತದೆ:

1. ಭೂ ಪರಿವರ್ತನೆ ಸಂಬಂಧಿತ ಸೇವೆಗಳು
2. ಕಟ್ಟಡ ಪರವಾನಿಗೆ ಸಂಬಂಧಿತ ಸೇವೆಗಳು
3. ವಿನ್ಯಾಸ ನಕ್ಷೆ ಪರಿಶೀಲನೆ ಮತ್ತು ಅನುಮೋದನಾ ಸೇವೆಗಳು
4. ಭೂ ಉಪಯೋಗಬದಲಾವಣೆ ಸಂಬಂಧಿತ ಸೇವೆಗಳು
5. ಡಿಜಿಟಲ್ ದಾಖಲೆ ನಿರ್ವಹಣೆ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ

ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು / ಯೋಜನಾ ಪ್ರಾಧಿಕಾರಗಳಲ್ಲಿ ULMS ತಂತ್ರಾಂಶದಡಿಯಲ್ಲಿ ವಿನ್ಯಾಸ ಅನುಮೋದನೆ ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸಲು 15 ಪೈಲಟ್‌ನಗರ/ಪಟ್ಟಣಗಳನ್ನು ಗುರುತಿಸಲಾಗಿದ್ದು, ವಿನ್ಯಾಸ ಅನುಮೋದನೆ ಮಾಡ್ಯೂಲ್ ಅನ್ನು ಸಿದ್ದಪಡಿಸುವ ಕಾರ್ಯಪ್ರಗತಿಯಲ್ಲಿದೆ.

ULMS ತಂತ್ರಾಂಶವು ವಿವಿಧ ಇಲಾಖೆಗಳ ಸಮನ್ವಯದೊಡನೆ ಅಭಿವೃದ್ಧಿಪಡಿಸಬೇಕಾಗಿದ್ದು, ಅಭಿವೃದ್ಧಿಪಡಿಸಿದ ನಂತರ ಸದರಿ ತಂತ್ರಾಂಶವನ್ನು ನಗರಾಭಿವೃದ್ಧಿ ಇಲಾಖೆಯಲ್ಲಿ ಅಳವಡಿಸಿಕೊಳ್ಳಲಾಗುವುದು.

ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆUnified Land Management System (ULMS) ತಂತ್ರಾಂಶವನ್ನು ಕರ್ನಾಟಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 3 ಹಂತಗಳಲ್ಲಿಅನುಷ್ಠಾನಗೊಳಿಸಲಾಗಿರುತ್ತದೆ. ಮೊದಲನೆ ಹಂತದಲ್ಲಿ 15, ಎರಡನೇ ಹಂತದಲ್ಲಿ 63 ಹಾಗೂ ಮೂರನೆ ಹಂತದಲ್ಲಿ 236 ನಗರ ಸ್ಥಳೀಯ ಸಂಸ್ಥೆಗಳಲ್ಲಿUnified Land Management System (ULMS) ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ ಮೊದಲನೆ ಮತ್ತು ಎರಡನೇ ಹಂತದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 158 ಕಟ್ಟಡ ಪರವಾನಿಗೆಗಳನ್ನು ಸಾರ್ವಜನಿಕರಿಗೆ ನೀಡಲಾಗಿರುತ್ತದೆ. ಹಾಗೂ 858 ಆರ್ಕಿಟೆಕ್ಟ್ (Architect) ಗಳನ್ನು Unified Land Management System (ULMS) ತಂತ್ರಾಂಶದಲ್ಲಿ ನೊಂದಣಿ ಮಾಡಲಾಗಿರುತ್ತದೆ.

ತಾಂತ್ರಿಕ ನ್ಯೂನ್ಯತೆಗಳನ್ನು / ಸಮಸ್ಯೆಗಳನ್ನು ಪರಿಹರಿಸಲು Unified Land Management System (ULMS) ತಂತ್ರಾಂಶದಲ್ಲಿ ಟಿಕೆಟಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಸಾರ್ವಜನಿಕರು ULMS ತಂತ್ರಾಂಶಕ್ಕೆ ಸಂಬಂಧಿಸಿದಂತೆ ಎಲ್ಲಾ ತಾಂತ್ರಿಕ ಸಮಸ್ಯೆಗಳನ್ನು ನೊಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಸಾರ್ವಜನಿಕರಿಂದ 596 ತಾಂತ್ರಿಕ ನೂನ್ಯತೆಗಳು ಸ್ವೀಕರಿಸಲಾಗಿದೆ ಅವುಗಳಲ್ಲಿ ಈಗಾಗಲೇ 507 ತಾಂತ್ರಿಕ ಸಮಸ್ಯೆಗಳನ್ನು ULMS ತಂತ್ರಾಂಶದ ಮೂಲಕ ಪರಿಹರಿಸಲಾಗಿದೆ. ಇನ್ನುಳಿದ ತಾಂತ್ರಿಕ ಸಮಸ್ಯೆಗಳನ್ನು ಹಂತಹಂತವಾಗಿ ULMS ಟಿಕೆಟಿಂಗ್ ಸಿಸ್ಟಮ್ ಮುಖಾಂತರ ಪರಿಹರಿಸಲಾಗುವುದು.

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

**ಕಡತ ಸಂಖ್ಯೆ: ನಅಇ 25 ಬೆಮಪ್ರಾ 2026 (ಇ)**